# ಸುದ್ದಿಸಂಚಯ

## ಬೆಂಗಳೂರಿನ ಶ್ರೀರಾಮಕೃಷ್ಣ ವಿದ್ಯಾರ್ಥಿಮಂದಿರದ ವಜ್ರಮಹೋತ್ಸವ



ಎಡದಿಂದ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ಸ್ಮರಣಾನಂದಜಿ, ಸ್ವಾಮಿ ಹರ್ಷಾನಂದಜಿ

ಬೆಂಗಳೂರಿನ ರಾಮಕೃಷ್ಣ ಮಠವು ಅರವತ್ತು ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರದ ವಜ್ರ ಮಹೋತ್ಸವವನ್ನು ವಿಶೇಷ ರೀತಿಯಲ್ಲಿ ಆಚರಿಸ ಲಾಯಿತು. ಸಂಸ್ಥೆಯ ಹಿರಿಯ ಹಾಗೂ ಕಿರಿಯ ವಿದ್ಯಾರ್ಥಿಗಳ ಅಪೇಕ್ಷೆಯಂತೆ ಒಂದು ಹೊಸ ಸಭಾಂಗಣವನ್ನು ನಿರ್ಮಿಸಲಾಗಿದೆ. ಈ ವಿದ್ಯಾರ್ಥಿಮಂದಿರದ ಪ್ರಾರಂಭದ ದಿನಗಳಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಶ್ರೀಮತ್ ಸ್ವಾಮಿ ಋತಾತ್ಮಾನಂದಜಿ ಅವರ ಹೆಸರನ್ನು ಈ ಸಭಾಮಂದಿರಕ್ಕೆ ಇಡಲಾಗಿದೆ. ವಿದ್ಯಾರ್ಥಿಗಳಿಗೆ ವಿಶೇಷ ಗಮನ ನೀಡುವ ಉದ್ದೇಶದಿಂದ ಪಾಠಪ್ರವಚನಗಳನ್ನು ನಡೆಸಲು ಹಾಗೂ ಒಳಾಂಗಣ ಕ್ರೀಡಾಂಗಣವಾಗಿಯೂ ಈ ವಿಶಾಲವಾದ ಸಭಾಂಗಣವನ್ನು ಬಳಸಲು ನಿರ್ಧರಿಸಲಾಗಿದೆ.

ಸೆಪ್ಟೆಂಬರ್ ೧೪ರಂದು ಈ ಸಭಾಂಗಣದ ಉದ್ಘಾಟನೆಯನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಪರಮ ಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾ ನಂದಜಿ ಮಹಾರಾಜ್ ನೆರವೇರಿಸಿದರು. ಆಶೀರ್ವಚನವನ್ನು ನೀಡುತ್ತಾ, ಪೂಜ್ಯರು ಇಂದಿನ ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾಗಿರುವ ಬದಲಾವಣೆಗಳ ಕುರಿತು ಸ್ಪಷ್ಟವಾಗಿ ತಿಳಿಸಿದರು. ಪೂಜ್ಯ ಸ್ವಾಮಿ ರಾಘವೇಶಾನಂದಜಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಮೌಲ್ಯಗಳ ಕುಸಿತದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಬೆಂಗಳೂರು ಮಠದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅತಿಥಿಗಳನ್ನು ಪರಿಚಯಿಸಿದರು. ಈ ಸಂದರ್ಭದಲ್ಲಿ ಕಟ್ಟಡದ ನಿರ್ಮಾಣದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ಎಲ್ಲರನ್ನೂ ಸನ್ಮಾನಿಸ ಲಾಯಿತು. ದಿನಾಂಕ ೧೩.೯.೨೦೦೬ರಿಂದ ೧೭.೯.೨೦೦೬ರವರೆಗೆ ಐದು ದಿನಗಳ ಕಾಲ ಹೋಮ ಹವನಾದಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ವಾದ್ಯಸಂಗೀತ, ಯಕ್ಷಗಾನ, ಶಿಳ್ಳೆ ಸಂಗೀತ ಹಾಗೂ ಲಯಲಾವಣ್ಯ-ಜಾನಪದ ಲೋಕ ಕಾರ್ಯಕ್ರಮಗಳು ನಾಡ ಸಂಸ್ಕೃತಿಯನ್ನು ಪರಿಚಯಿಸಿದವು.

---

**ನೆರೆ ಪರಿಹಾರ :** ಸೆಪ್ಟೆಂಬರ್ ೨೦೦೬ರಲ್ಲಿ ಸಂಭವಿಸಿದ ನೆರೆ ಹಾವಳಿಯಿಂದ ಪಶ್ಚಿಮ ಬಂಗಾಳ, ಒರಿಸ್ಸಾ ರಾಜ್ಯಗಳಲ್ಲಿ ಬಹಳಷ್ಟು ಹಾನಿ ಉಂಟಾಗಿದೆ. ಪಶ್ಚಿಮ ಬಂಗಾಳದ ಆಂಟ್‌ಪುರ್ ಕೇಂದ್ರವು ೧೨,೫೦೦ ಕೆ.ಜಿ. ಅವಲಕ್ಕಿ ಹಾಗೂ ೨೨೦೦ ಕೆ.ಜಿ. ಸಕ್ಕರೆಯನ್ನು ಸಂತ್ರಸ್ತರಿಗೆ ನೀಡಿದೆ. ಮಾಲ್ಡಾ ಕೇಂದ್ರವು ೨,೦೦೦ ಬುಡಕಟ್ಟು ಜನಾಂಗದ ಕುಟುಂಬಗಳಿಗೆ ಕಿಚುಡಿ ಮುಂತಾದ ಖಾದ್ಯಗಳನ್ನು ನೀಡಿದೆ. ಬೇಲೂರು ಮಠದ ಸಮೀಪದಲ್ಲಿರುವ ಶಾರದಾಪೀಠದ ವತಿಯಿಂದ ಹೌರಾ ಜಿಲ್ಲೆಯ ಒಂಬತ್ತು ಹಳ್ಳಿಗಳಲ್ಲಿ ೧೨, ೮೫೦ ಸಂತ್ರಸ್ತರಿಗೆ ಕಿಚಡಿ, ಅವಲಕ್ಕಿ, ಸಕ್ಕರೆ ಹಾಗೂ ಔಷಧಿಗಳನ್ನು ನೀಡಲಾಗಿದೆ. ಸರ್ಗಾಚಿ ಕೇಂದ್ರವು ೨,೫೦೦ ಪೀಡಿತರಿಗೆ ಕಿಚಡಿಯನ್ನು ನೀಡಿದೆ. ಕೊಲ್ಕತಾದ ಬಾರಾನಗರದಲ್ಲಿರುವ ಮಠದ ಮೂಲಕ ೧೯೫ ಸೀರೆಗಳು, ೫೦ ಪಂಚೆಗಳು ಹಾಗೂ ೧೦೯ ಮಕ್ಕಳ ವಸ್ತ್ರಗಳನ್ನು ನೀಡಲಾಗಿದೆ.

ಇದಲ್ಲದೆ ಆಂಧ್ರಪ್ರದೇಶದ ರಾಜಮಹೇಂದ್ರಿ, ಗುಜರಾತಿನ ರಾಜ್‌ಕೋಟ್, ಮಹಾರಾಷ್ಟ್ರದ ಮುಂಬೈ, ಒರಿಸ್ಸಾದ ಭುವ ನೇಶ್ವರ ಹಾಗೂ ಪುರಿ, ರಾಜಸ್ಥಾನದ ಜಯ್‌ಪುರ್ ನಗರಗಳಲ್ಲಿನ ಕೇಂದ್ರಗಳಿಂದ ವ್ಯಾಪಕವಾದ ಪರಿಹಾರ ಕಾರ್ಯವು ಮುಂದುವರಿದಿದೆ. ಮುಖ್ಯವಾಗಿ ನಿರಾಶ್ರಿತರ ದೈನಂದಿನ ಅಗತ್ಯಗಳನ್ನು ಪೂರೈಸುವತ್ತ ಪ್ರಯತ್ನ ನಡೆಯುತ್ತಿದೆ.

**ವೈದ್ಯಕೀಯ ಪರಿಹಾರ :** ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳುಗಳ ಅವಧಿಯಲ್ಲಿ ಕೊಲ್ಕತಾದ ಬಾರಾನಗರದ ಮಠ, ಉತ್ತರ ಪ್ರದೇಶದ ಲಕ್ನೊ, ಗುಜರಾತಿನ ಪೋರಬಂದರ್, ಹಾಗೂ ರಾಜ್‌ಕೋಟ್-ಈ ಪ್ರದೇಶಗಳಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರಗಳ ಮೂಲಕ ಕಣ್ಣಿನ ರೋಗಗಳ ಉಚಿತ ತಪಾಸಣೆ ಯನ್ನು ೨,೦೨೪ ರೋಗಿಗಳಿಗೆ ಮಾಡಲಾಯಿತು. ಇವರಲ್ಲಿ ೧೭೨ ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನೂ ಮಾಡ ಲಾಯಿತು.